MYSORE LEGISLATIVE ASSEMBLY

ELEVENTH DAY.

Saturday, the 22nd October 1955.

The House met in the Crawford Hall, Mysore, at Thirty Minutes past Eight of the Clock.

MR. SPEAKER (SRI H. S. RUDRAPPA, B.SC., LL.B.) in the Chair.

QUESTIONS AND ANSWERS.

Sri H. M. CHANNABASAPPA (Minister for Industries).—Sir, I request that the questions pertaining to the Hon'ble Education Minister may be taken up later, and the questions pertaining to the Home Minister and Revenue Minister may be allowed to be answered by me.

Mr. SPEAKER.—Yes.

Major and Minor Tanks (Repairs).

Q.—581. Sri SIDDIAH *alias* KUNNIAH (Gundlupet-Heggadadevankote—Scheduled Castes).—

Will the Government be pleased to state :—

(*a*) the number of major and minor in the State ;

(*b*) the number of them which are the control of the Public Works tment ;

(*c*) whether it has come to their notice that the tanks which are not under the control of the Public Works Department are deteriorating for want of annual repairs ?

A.—Sri H. M. CHANNABASAPPA (Minister for Industries) on behalf of SRI KADIDAL MANJAPPA (Minister for Revenue and Public Works).—

(*a*) Major	...	2,665
Minor	...	22,225
(*b*) Major	...	56
Minor	...	...

(*c*) This has happened in a number of cases.

ಶ್ರೀ ಸಿದ್ದಯ್ಯ ಉರುಫ್ ಕುನ್ನಯ್ಯ.—ಗುಂಡ್ಲು ಹೇಚೆ ಮತ್ತು ಹೆಗ್ಗಡದೇವನಕೋಟೆ ತಾಲ್ಲೂಕುಗಳಲ್ಲಿ ಮೇಜರ್ ಮತ್ತು ಮೈನರ್ ಕೆರೆಗಳೆಷ್ಟಿವೆ ?

*ಶ್ರೀ ಎಚ್. ಎಂ. ಚನ್ನಬಸಪ್ಪ.—ಆ ವಿವರಗಳು ಈಗ ನನ್ನಲ್ಲಿಲ್ಲ.

ಶ್ರೀ ಸಿದ್ದಯ್ಯ ಉರುಫ್ ಕುನ್ನಯ್ಯ.—ಎಷ್ಟು ಕೆರೆಗಳು ರಿಪೇರಿಯಾಗಿಲ್ಲ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಮೊದಲೇ ತಾಲ್ಲೂಕುವಾರು ಸಂಖ್ಯೆ ಕೇಳಿದ್ದರೆ ಹೇಳುತ್ತಿದ್ದೆ ; ತಾವು ಒಟ್ಟು ಸಂಖ್ಯೆಯನ್ನು ಕೇಳಿದ್ದೀರಿ.

ಶ್ರೀ ಸಿದ್ದಯ್ಯ ಉರುಫ್ ಕುನ್ನಯ್ಯ.—ಯಾವಾಗ ಆ ವಿವರಗಳನ್ನು ತಿಳಿಸುತ್ತೀರಿ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನೀವು ಕೇಳಿದರೆ ಕಳುಹಿಸಿ ಕೊಡುತ್ತೇವೆ.

ಶ್ರೀ ಬಿ. ರಾಚಯ್ಯ.—ಒಟ್ಟು ಸಂಸ್ಥಾನದಲ್ಲಿ ಪಬ್ಲಿಕ್ ವರ್ಕ್ಸ್ ಇಲಾಖೆಯ ಆಡಳಿತಕ್ಕೊಳಪಟ್ಟಿರುವ ಕೆರೆಗಳೆಷ್ಟು ಮತ್ತು ಗುಂಡ್ಲುಪೇಟೆ ತಾಲ್ಲೂಕು ದೊಮ್ಮಲಾಪುರದ ಕೆರೆ ರಿಪೇರಿ ಆಗಿದೆಯೆ ಎಂಬ ಪ್ರಶ್ನೆಗಳು ಮೂರು ವರ್ಷಗಳಿಂದ ಬರುತ್ತಿವೆಯೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಪಬ್ಲಿಕ್ ವರ್ಕ್ಸ್ ಇಲಾಖೆಯ ಮೇಲ್ವಿಚಾರಣೆಯಲ್ಲಿರುವುದು 56 ಮೇಜರ್ ಕೆರೆಗಳು. ಅವುಗಳನ್ನು ರಿಪೇರಿ ಮಾಡುತ್ತಿದ್ದಾರೆ.

ಶ್ರೀ ಬಿ. ರಾಚಯ್ಯ.—ತಾವು ಮೈನರ್ ಕೆರೆಗಳನ್ನು ಜೀರ್ಣೋದ್ಧಾರ ಮತ್ತು ರೀಪೇರಿ ಮಾಡುವ ಬಗ್ಗೆ ನಿರ್ದಿಷ್ಟವಾದ ಒಂದು ಕಾರ್ಯಕ್ರಮವನ್ನಿಟ್ಟುಕೊಂಡು, ಒಂದೊಂದು ತಾಲ್ಲೂಕಿನಲ್ಲಿ ಇಷ್ಟು ಮಾಡಬೇಕೆಂದು ಗೊತ್ತುಮಾಡಿ ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನಿರ್ದಿಷ್ಟವಾಗಿ ನೋಡಿ ಮಾಡುತ್ತೇವೆ.

ಶ್ರೀ ಬಿ. ರಾಚಯ್ಯ.—ಸಾಮಾನ್ಯವಾಗಿ, ತಮಗೆ ತಿಳಿದಿರುವ ಹಾಗೆ, ನಂಜನಗೂಡು ತಾಲ್ಲೂಕಿನಲ್ಲಿ ಎಷ್ಟೋ ಅಂದಾಜುಗಳು ತಯಾರಾಗಿ ಅವು ಸರ್ಕಲ್ ಆಫೀಸಿನಲ್ಲಿ ಉಳಿಯುತ್ತಿವೆಂಬುದು ಗೊತ್ತಿದೆಯೆ ?

Sri H. M. CHANNABASAPPA.—That is a different question altogether. ಅದಕ್ಕೆ ನಾನಾ ಕಾರಣಗಳಿರಬಹುದು. ಅಚ್ಚು ಕಟ್ಟಿಲ್ಲದೇ ಇರಬಹುದು ಅಥವಾ ಕಡಮೆ ಇರಬಹುದು, ಅಂದಾಜು ಹೆಚ್ಚಿರಬಹುದು, ಅದರಿಂದ ಪ್ರತಿಫಲ ವಿಲ್ಲದೇ ಇರಬಹುದು, ರೈತರು ಮುಚ್ಚಳಿಕೆ ಬರೆದು ಕೊಡದೇ ಇರಬಹುದು, ಹೀಗೆ ನಾನಾ ಕಾರಣಗಳಿರುತ್ತವೆ.

* Asterisk indicates that the remarks or speeches have not been revised by the Member concerned.

ಶ್ರೀ ಬಿ. ರಾಚಯ್ಯ.—ಎಲ್ಲಕ್ಕಿಂತ ಹೆಚ್ಚಾಗಿ ಈ ಡಿವಿಜನಿನಲ್ಲಿ ಕೆಲಸ ಕಾರ್ಯಗಳು ನಿಂತು ಹೋಗಿವೆ ಎಂಬುದರ ಬಗ್ಗೆ ಅನೇಕ ಕಡೆಗಳಿಂದ ಮನವಿಗಳು ಬಂದಿಲ್ಲವೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಮನವಿ ಬಂದಿರ ಬಹುದು. ಆದರೆ ಕಾರಣವಿಲ್ಲದೆ ಹೀಗಾಗಿದೆ ಎಂದು ಒಪ್ಪುವುದಕ್ಕಾಗುವುದಿಲ್ಲ. ಕಾರಣ ಒಂದಲ್ಲ ಒಂದಿದ್ದೇ ಇರುತ್ತದೆ. ಒಂದು ವೇಳೆ ಯಾವುದಾದರೂ ಒಂದು ನಿರ್ದಿಷ್ಟವಲ್ಲದ ಕಾರಣವಿಲ್ಲದೆ ನಿಂತು ಹೋಗಿದ್ದರೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಬಿ. ರಾಚಯ್ಯ.—ಯಳಂದೂರು ತಾಲ್ಲೂಕಿನಲ್ಲಿ ಕೆರೆಗಳನ್ನು ರಿಪೇರಿ ಮಾಡುವುದಕ್ಕೆ ಒಂದು ಪ್ರೋಗ್ರಾಮ್ ತಯಾರು ಮಾಡಿ, ಅದರಲ್ಲಿ ರೈತರು ಕೊಡ ತಕ್ಕ ಕಾಂಟ್ರಿಬ್ಯೂಷನ್ ಕೊಡುತ್ತೇವೆಂದು ಒಪ್ಪಿದ್ದರೂ ಆ ಕೆಲಸ ನಿಲ್ಲಲು ಕಾರಣವೇನು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದು ಜಹಗೀರಿ ಯಾಗಿರುವುದರಿಂದ, ಅಲ್ಲಿ ರೈತರು ಇನಾಮ್‌ದಾರರು ಎಂದಿರುವುದರಿಂದ, ಏನೋ ಕಷ್ಟವಿರಬಹುದು. ಆ ಕೆಲಸಗಳನ್ನು ಮಾಡಬೇಕೆಂದು ಸರ್ಕಾರದ ಇಷ್ಟ.

ಶ್ರೀ ಬಿ. ಹುಚ್ಚೇಗೌಡ.—ಸಂಸ್ಥಾನದಲ್ಲಿರುವ 2,665 ಮೇಜರ್ ಕೆರೆಗಳು ಮತ್ತು 22,225 ಮೈನರ್ ಕೆರೆಗಳು ಇವೆಲ್ಲವೂ ದುರಸ್ತಾಗಿ ಉಪ ಯೋಗದಲ್ಲವೆಯೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಎಲ್ಲವೂ ದುರಸ್ತಾ ಗಿಲ್ಲ; ಬಹು ಭಾಗ ದುರಸ್ತಾಗಿವೆ, ಕೆಲವು ನಾದುರ ಸ್ತಾಗಿವೆ.

ಶ್ರೀ ಬಿ. ಹುಚ್ಚೇಗೌಡ.—ನಾದುರಸ್ತಿನಲ್ಲಿರುವು ದೆಷ್ಟು, ದುರಸ್ತಾಗಿರುವುದೆಷ್ಟು ? ಸುಮಾರು ಶೇಕಡ ಎಷ್ಟು ದುರಸ್ತಾಗಿ ಉಪಯೋಗದಲ್ಲಿವೆ ? ಸುಮಾರು ಶೇಕಡ 25 ರಷ್ಟಿವೆಯೆ ?

Sri H. M. CHANNABASAPPA.—I would like to have notice.

ಶ್ರೀ ಬಿ. ಹುಚ್ಚೇಗೌಡ.—ಸ್ವಾಮಿ, ದುರಸ್ತಾಗಿ ರುವ ಮತ್ತು ಉಪಯೋಗವಾಗುತ್ತಿರುವ ಕೆರೆಗಳೆಷ್ಟು ಎಂದು ಕೇಳಿದೆ, ಅದಕ್ಕೆ ಉತ್ತರವಿಲ್ಲ.

ಅಧ್ಯಕ್ಷರು.—ಕೇಳಿರುವುದಕ್ಕೆ ಉತ್ತರ ಕೊಟ್ಟಿದ್ದಾರೆ.

ಶ್ರೀ ಬಿ. ಹುಚ್ಚೇಗೌಡ.—ಆರು ಸಾವಿರ ಕೆರೆಗಳೂ ಉಪಯೋಗದಲ್ಲಲ್ಲವೆಂಬುದು ಗೊತ್ತಿದೆಯೆ ?

ಅಧ್ಯಕ್ಷರು.—ರಿಪೇರಿ ಆಗಿರುವುದೆಷ್ಟೆಂಬುದನ್ನು ಬೇಕಾದರೆ ಹೇಳುತ್ತಾರೆ.

ಶ್ರೀ ಬಿ. ಹುಚ್ಚೇಗೌಡ.—ಕೆರೆಗಳೇ ಇಲ್ಲವೆಂದು ನಾನು ಹೇಳುವುದು.

Sri H. M. CHANNABASAPPA.—I should like to submit that the question pertains to the deterioration of tanks on account of non-maintenance. That is the subject matter of the question.

ಶ್ರೀ ಬಿ. ಹುಚ್ಚೇಗೌಡ.—Deterioration ಆಗಿ ಕೆಟ್ಟು ಹೋಗಿದ್ದರೆ ಕೆರೆಗಳಿರುತ್ತವೆಂದು ಹೇಳ ಬಹುದು ; ಜೀರ್ಣೋದ್ಧಾರವೇ ಆಗಿಲ್ಲದಿದ್ದರೆ ಕೆರೆಗಳಿ ರುತ್ತವೆಂದು ಹೇಗೆ ಹೇಳುವುದು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇಷ್ಟು ಕೆರೆಗಳಲ್ಲಿ ಅನೇಕ ಕೆರೆಗಳು ಜೀರ್ಣೋದ್ಧಾರವಾಗಿವೆ, ಇನ್ನು ಕೆಲವು ಆಗಿಲ್ಲ.

ಶ್ರೀ ಬಿ. ಹುಚ್ಚೇಗೌಡ.—ಶೇಕಡ 50 ರಷ್ಟಾದರೂ ಆಗಿವೆಯ ?

ಶ್ರೀ ಎಚ್. ಎಂ. ಚನ ಬಸಪ . —ನೋಟೀಸ್.

ಶ್ರೀ ಬಿ. ಹುಚ್ಚೇಗೌಡ.—ಜೀರ್ಣೋದ್ಧಾರವಾ ಗದೇಯಿದ್ದರೆ ಅವನ್ನು ಹೇಗೆ ಕೆರೆಯೆಂದು ಹೇಳು ವುದು ?

Mr. SPEAKER.—The Hon'ble Minister will try and furnish the information. If not now, at least later.

ಶ್ರೀ ಎಚ್. ಎಂ. ಚನ್ನಬಸಪ್ಪ.—ಪ್ರಶ್ನೆ ನಿರ್ದಿಷ್ಟ ವಾಗಿದ್ದರೆ ಕೊಡುತ್ತೇನೆ.

ಶ್ರೀ ಬಿ. ಹುಚ್ಚೇಗೌಡ.—ಇಪ್ಪತ್ತೆರಡು ಸಾವಿರ ಕೆರೆಗಳೂ ಜೀರ್ಣೋದ್ಧಾರವಾಗಿವೆಯೇ, ಉಪಯೋಗ ದಲ್ಲವೆಯೇ ! ನಾದುರಸ್ತಾಗಿವೆಯೆ ಅಥವಾ ದುರ ಸ್ತಾಗಿವೆಯೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಕೆರೆಗಳು ಜೀರ್ಣೋದ್ಧಾರವಾಗದೇಯಿದ್ದವಾತ್ರಕ್ಕೇ ನಾದುರ ಸ್ತಾಗಿವೆ ಎಂದು ಹೇಳುವುದಕ್ಕಾಗುವುದಿಲ್ಲ. ಜೀರ್ಣೋದ್ಧಾರ ಮಾಡದೇಯಿದ್ದರೂ ಉಪಯೋಗ ದಲ್ಲಿರಬಹುದು.

ಶ್ರೀ ಬಿ. ಹುಚ್ಚೇಗೌಡ.—ಇಪ್ಪತ್ತೆರಡು ಸಾವಿರ ಎಂದರೆ, ಯಾವಕಾಲದಲ್ಲೋ ಒಡೆದು ಹೋಗಿರುವುದ ನ್ನೆಲ್ಲಾ ಸೇರಿಸಿಕೊಂಡು ಇಷ್ಟಾಗಿರಬಹುದು. ನನ್ನ ಪ್ರಶ್ನೆ ಈಗ ಉಪಯೋಗದಲ್ಲಿರುವ ಕೆರೆಗಳು, ಈಗ ಸಾಲೇಸಾಲು ಜೀರ್ಣೋದ್ಧಾರ ಮಾಡುತ್ತೀರಾ ಎಂಬುದು.

Sri H. M. CHANNABASAPPA.—I have not been able to follow the Hon'ble Member.

Mr. SPEAKER.—He wants the number of tanks which are now in use.

Sri H. M. CHANNABASAPPA.—For that I said, I want notice. If the Hon'ble Member wants, Government is prepared to furnish the answer.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—56 ಕೆರೆಗ ಳನ್ನು ಮಾತ್ರ ಪಬ್ಲಿಕ್ ವರ್ಕ್ಸ್ ಇಲಾಖೆಯವರು ನೋಡಿಕೊಳ್ಳುತ್ತಿದ್ದಾರೆಂದು ತಿಳಿಸಿದ್ದೀರಿ ; ಬಾಕಿ ಕೆರೆ ಗಳ ರಿಪೇರಿ ಇತ್ಯಾದಿಗಳನ್ನು ಯಾರು ನೋಡಿಕೊಳ್ಳು ವವರು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಮೇಜರ್ ಕೆರೆ ಗಳನ್ನು ಮಾತ್ರ ದುರಸ್ತು ಮಾಡಿ, ಪಬ್ಲಿಕ್ ವರ್ಕ್ಸ್ ಇಲಾಖೆಯವರ supervision, ಎಂದರೆ, ಮೇಲ್ವಿಚಾ ರಣೆಯಲ್ಲಿಟ್ಟುಕೊಂಡಿದ್ದಾರೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಬಾಕಿ ಕೆರೆ ಗಳನ್ನು ಯಾರು ನೋಡಿಕೊಳ್ಳುತ್ತಾರೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಬಾಕಿ ಕೆರೆಗಳನ್ನು ಕಾನೂನಿನ ಪ್ರಕಾರ ಗ್ರಾಮಸ್ಥರೂ ರೈತರೂ ಸೇರಿ ರಿಪೇರಿ ಮಾಡಬೇಕು. ಅವುಗಳ ಮೇಲ್ವಿಚಾರಣೆ ಯನ್ನು ರೆವಿನ್ಯೂ ಇಲಾಖೆ ನೋಡಿಕೊಳ್ಳತಕ್ಕದ್ದು.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ರೆವಿನ್ಯೂ ಇಲಾಖೆಯವರು ಸರಿಯಾಗಿ ನೋಡಿಕೊಳ್ಳುತ್ತಿಲ್ಲವೆಂದು ದೂರುಗಳು ಬಂದಿವೆಯೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದು ಬೇರೆ ವಿಷಯ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಅನೇಕ ಮೇಜರ್ ಮತ್ತು ಮೈನರ್ ಕೆರೆಗಳು ಒಡೆದುಹೋಗಿ ದ್ದರೂ ಆ ಕೆರೆಗಳ ಅಚ್ಚುಕಟ್ಟುದಾರರಿಂದ ತರೀ ಕಂದಾಯವನ್ನು ವಸೂಲು ಮಾಡುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೆ ?

Sri H. M. CHANNABASAPPA.—I want notice.

ಶ್ರೀ ಆರ್. ಅನಂತರಾಮನ್.—ಈ ಕೆರೆಗಳ ಕೆಳಗೆ ಒಟ್ಟು ಎಷ್ಟು ಅಚ್ಚುಕಟ್ಟಿದೆ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನೋಟೀಸ್.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಎಲ್ಲ ಮೇಜರ್ ಮತ್ತು ಮೈನರ್ ಕೆರೆಗಳ ಆಡಳಿತವನ್ನು ಪಬ್ಲಿಕ್ ವರ್ಕ್ಸ್ ಇಲಾಖೆಗೆ ವಹಿಸಬೇಕೆಂದು ಈ ನಡೆ ಯಲ್ಲಿ ನಾಲ್ಕಾರು ವರ್ಷಗಳಿಂದ ಒತ್ತಾಯಮಾಡುತ್ತಿ ರುವುದು ತಮ್ಮ ಗಮನಕ್ಕೆ ಬಂದಿದೆಯೆ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಮಾಡುತ್ತಿದ್ದಾರೆ.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಅದರ ಮೇಲೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಎಲ್ಲ ಕೆರೆಗಳ ಸಾಲಾಬಾದು ಕಾಮಗಾರಿಯನ್ನು ಸರ್ಕಾರ ವಹಿಸಿ ಕೊಳ್ಳಲು ಅಭ್ಯಂತರವಿಲ್ಲ. ಆದರೆ ರೈತರು ಅದಕ್ಕೆ ಖರ್ಚಾಗುವ ಹಣವನ್ನು ಕೊಡಲು ಸಿದ್ಧರಾಗಿದ್ದಾರೆ ಹಾಗೆ ಮಾಡಬಹುದು.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಈ ಕೆರೆಗಳ ಹೊಕ್ಕಿ ಎಷ್ಟೋ ಕೆರೆಗಳಿಗೆ ತರಿ ಅಚ್ಚುಕಟ್ಟು ಕೂಡ ಇರು ತ್ತದೆಯಲ್ಲವೆ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇರುತ್ತದೆ.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಆ ಅಚ್ಚು ಕಟ್ಟಿಗೆ ತರೀ ಕಂದಾಯವನ್ನು ವಸೂಲುಮಾಡುತ್ತಿರು ವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ವಸೂಲುಮಾಡು ತ್ತಿರುವುದು ಸರ್ಕಾರದವರಿಗೂ ಗೊತ್ತಿದೆ, ಮಾನ್ಯ ಸದಸ್ಯರಿಗೂ ಗೊತ್ತಿದೆ.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ತರೀ ಕಂದಾಯವನ್ನು ವಸೂಲುಮಾಡಿದ ಮೇಲೆ ಸಲೀಸಾಗಿ ನೀರು ಸರಬರಾಯಿಮಾಡುವುದು ಸರ್ಕಾರದವರ ಕರ್ತವ್ಯವಲ್ಲವೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಕೆರೆ ನಾದುರಸ್ತಿ ನಲ್ಲಿದ್ದರೆ ಸರ್ಕಾರದವರು ಮಾಡಬಹುದು. Maintenance ಕೆಲಸಕ್ಕೂ, ದುರಸ್ತಿನ ಕೆಲಸಕ್ಕೂ ವ್ಯತ್ಯಾಸವಿದೆಯೆಂಬುದನ್ನು ಮಾನ್ಯ ಸದಸ್ಯರೇ ಕಂಡಿದ್ದಾರೆ. Maintenance ಕೆಲಸ ರೈತರಿಗೆ ಸೇರಿದ್ದು. ಕೆರೆ ಒಡೆದು ಹೋದರೆ ಅದನ್ನು restore ಮಾಡುವುದು ಸರ್ಕಾರದವರ ಕರ್ತವ್ಯ. ಅದರಲ್ಲಿ ರೈತರ ಜವಾಬ್ದಾ ರಿಯೂ ಇದೆ.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ದುರಸ್ತು ಮಾಡುವುದರಲ್ಲಿ ರೈತರೂ ಬದ್ಧರೆಂಬುದೇನೋ ನ್ಯಾಯ. ಆದರೆ ಇದು ಒಂದು ಶಾಸನಕ್ಕೆ ಅನುಗುಣ ವಾಗಿತಾನೆ ನಡೆಯತಕ್ಕದ್ದು?

ಶ್ರೀ ಎಚ್. ಎಂ. ಚನ್ನಬಸಪ್ಪ.—ಹೌದು.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಈ ಶಾಸನ ವನ್ನು ಜಾರಿಮಾಡುವವರು ಯಾರು?

ಶ್ರೀ ಎಚ್. ಎಂ. ಚನ್ನಬಸಪ್ಪ.—ರೆವಿನ್ಯೂ ಅಧಿ ಕಾರಿಗಳು.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಹಾಗಾ ದರೆ, ಆ ರೀತಿ ಶಾಸನವನ್ನು ಜಾರಿಯೇ ಮಾಡದೆ ಹತ್ತಾರು ವರ್ಷಗಳಿಂದ ತಾತ್ಸಾರದಿಂದ ರೆವಿನ್ಯೂ ಇಲಾಖೆಯವರಿದ್ದಾರೆಂಬುದು ಗೊತ್ತಿದೆಯೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಸರ್ಕಾರದವರು ಜಾರಿಗೆ ಕೊಡುವುದಕ್ಕೂ ರೈತರ ಸಹಕಾರವೇ ಬೇಕೆಂ ಬುದು ಮಾನ್ಯಸದಸ್ಯರಿಗೇ ಗೊತ್ತಿದೆ.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಸರ್ಕಾರದ ಕಾನೂನನ್ನು ಜಾರಿಮಾಡುವುದರಲ್ಲಿ ರೆವಿನ್ಯೂ ಅಧಿ ಕಾರಿಗಳು ಅಷ್ಟು ಶ್ರದ್ಧೆವಹಿಸದಿರುವುದರಿಂದ ಈ ಸ್ಥಿತಿಗೆ ಬಂದಿದೆಯೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಸರ್ಕಾರದ ಗಮನಕ್ಕೆ ಬಂದಿರತಕ್ಕದ್ದು, ಸರ್ಕಾರಿ ಅಧಿಕಾರಿಗಳು ಶಾಸನವನ್ನು ಜಾರಿಗೆ ತರಲು ಪ್ರಯತ್ನಪಟ್ಟರೂ ಗ್ರಾಮಸ್ಥರು ಮತ್ತು ರೈತರು ನಿರೀಕ್ಷಿಸಿದಷ್ಟು ಪ್ರಮಾಣದಲ್ಲಿ ಸಹಕಾರವನ್ನು ಕೊಡದಿರುವುದರಿಂದ ಈ ಸ್ಥಿತಿ ಬಂತು ಎಂದು.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಈಗಲಾ ದರೂ ಪ್ರಯತ್ನಮಾಡಿ ರೈತರ ಸಹಕಾರವನ್ನು ಪಡೆದು ಈ ಕೆಲಸವನ್ನು ಕೈಕೊಳ್ಳುತ್ತೀರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅಗತ್ಯವಾಗಿ ಮಾಡುತ್ತೇವೆ. ಆದರೆ, ರೈತರ ಸಹಕಾರವನ್ನೂ ಮಾನ್ಯ ಸದಸ್ಯರು ಕೋರುವುದು ಅತ್ಯಾವಶ್ಯಕ.

ಶ್ರೀ ಟಿ. ಸಿ. ಬಸಪ್ಪ.—ಕೆರೆಗಳ ವಿಚಾರದಲ್ಲಿ ಜೀರ್ಣೋದ್ಧಾರ ಮಾಡುವುದಕ್ಕೇನಾದರೂ ನಿರ್ದಿಷ್ಟ ವಾದ ಯೋಜನೆಯನ್ನು ಹಾಕಿಕೊಂಡಿದ್ದೀರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಹಾಕಿಕೊಂಡಿ ದ್ದೇವೆ.

ಶ್ರೀ ಟಿ. ಸಿ. ಬಸಪ್ಪ.—ಎಷ್ಟು ವರ್ಷಗಳಲ್ಲಿ ಎಲ್ಲ ವನ್ನೂ restore ಮಾಡಬೇಕೆಂದು ಮಾಡಿದ್ದೀರಿ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಹಣ ಒದಗಿ ದಂತೆಲ್ಲಾ ಮತ್ತು ಕೆರೆಗಳ ಅಂದಾಜು ಬಂದಂತೆಲ್ಲಾ ಆಯಾ ಕೆರೆಗಳಿಂದ ಬರತಕ್ಕ ಉತ್ಪತ್ತಿಯನ್ನು ನೋಡಿ ಕೊಂಡು ಮಂಜೂರು ಮಾಡುತ್ತೇವೆ.

ಶ್ರೀ ಟಿ. ಸಿ. ಬಸಪ್ಪ.—ಎಷ್ಟು ಕೆರೆಗಳು ರೆಸ್ಟೋರ್ ಆಗಬೇಕಾಗಿವೆ, ಎಷ್ಟು ವರ್ಷಗಳಲ್ಲಿ ಮುಗಿಸುವುದಕ್ಕೆ ಸಾಧ್ಯವೆಂದು ಯೋಜನೆ ಹಾಕಿಕೊಂಡಿದ್ದೀರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಪಂಚವಾರ್ಷಿಕ ಯೋಜನೆಯಲ್ಲಿ ಇಷ್ಟು ಕೆರೆಗಳನ್ನು ಮಾಡಬೇಕು, ಇಷ್ಟು ಹಣ ಒದಗಿಸಬೇಕು ಎಂದು ಮಾಡಿರುವುದು ಮಾನ್ಯಸದಸ್ಯರಿಗೇ ಗೊತ್ತಿದೆ.

ಶ್ರೀ ಟಿ. ಸಿ. ಬಸಪ್ಪ.—ಎಷ್ಟು ವರ್ಷದಲ್ಲಿ ಮುಗಿಸ ಬೇಕೆಂದು ಮಾಡಿದ್ದೀರಿ?

Sri H. M. CHANNABASAPPA.—It is a bit difficult to say that; I want notice for that.

ಶ್ರೀ ಟಿ. ಸಿ. ಬಸಪ್ಪ.—ಈಗಲಾದರೂ ಸರ್ಕಾರದ ವರು ಯೋಜನೆಮಾಡಿ ಇಷ್ಟು ವರ್ಷದಲ್ಲಿ ಮುಗಿಸಬೇ ಕೆಂದು ಯೋಜನೆಯೊಂದನ್ನು ಹಾಕಿಕೊಳ್ಳುವುದಕ್ಕೆ ಸಾಧ್ಯವೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಸರ್ಕಾರದವರು ಎಲ್ಲ ಕೆರೆಗಳನ್ನೂ ದುರಸ್ತುಮಾಡುವುದಕ್ಕೆ ಸಾಧ್ಯ ವಿಲ್ಲ. ಯಾವ ಯಾವ ಕೆರೆಗಳನ್ನು ದುರಸ್ತುಮಾಡಿದರೆ ಜನರಿಗೂ ಮತ್ತು ಸರ್ಕಾರದವರಿಗೂ ಅನುಕೂಲವಾ ಗುತ್ತದೆಯೋ, ಅಂಥ ಕೆರೆಗಳನ್ನು ದುರಸ್ತುಮಾಡಿಸು ತ್ತೇವೆ.

ಶ್ರೀ ಟಿ. ಸಿ. ಬಸಪ್ಪ.—ಪಬ್ಲಿಕ್‌ವರ್ಕ್ಸ್ ಇಲಾಖೆಯ ವರು ಈ ರೀತಿಯಾಗಿ ದುರಸ್ತು ಮಾಡುವುದಕ್ಕನುಕೂಲ ವಾಗುವಂತೆ ಕಾನೂನು ತಿದ್ದುಪಡಿ ಮಾಡುವುದಕ್ಕೆ ಸಾಧ್ಯವಿಲ್ಲವೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ತಿದ್ದುಪಡಿಮಾಡ ಬಹುದು. ಆದರೆ, ರೈತರ ಮೇಲೆಯೂ ಹೊರೆ ಹಾಕ

(ಶ್ರೀ ಎಚ್. ಎಂ. ಚನ್ನಬಸಪ್ಪ.)

ಬೇಕಾಗುತ್ತದೆ. ರೈತರು ಅದಕ್ಕೆ ಒಪ್ಪುವುದಾದರೆ ಮಾಡುತ್ತೇವೆ.

ಶ್ರೀ ಟಿ. ಸಿ. ಬನಪ್ಪ.—ಈ ರೀತಿ ರೂಲ್ಸನ್ನು ಬದಲಾವಣೆ ಮಾಡುವುದಕ್ಕೆ ಜನರು ಒಪ್ಪುತ್ತಾರೆಂದು ಅನೇಕಸಾರಿ ಅಸೆಂಬ್ಲಿಯಲ್ಲೇ ಹೇಳಿಲ್ಲವೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ರೈತರು ಕೊಡುವುದಾದರೆ ಸರ್ಕಾರದವರಿಗೆ ಅಭ್ಯಂತರವಿಲ್ಲ.

ಶ್ರೀ ಟಿ. ಸಿ. ಬನಪ್ಪ.—ಅಸೆಂಬ್ಲಿಯಲ್ಲಿ ಅಭಿಪ್ರಾಯ ಕೊಟ್ಟಮೇಲೆ ಆ ರೀತಿ ಮಾಡುವುದಕ್ಕೆ ಸಾಧ್ಯವಿಲ್ಲವೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಸಭೆಯಲ್ಲಿ ಆ ರೀತಿ ಹೇಳಿಲ್ಲ. ರೈತರು ಇದಕ್ಕೆ ಕೊಡಬೇಕಾದ ಹಣವನ್ನು ಕೊಡುತ್ತಾರೆಂದು ಈ ಸಭೆ ಅಭಿಪ್ರಾಯ ಪಟ್ಟಿಲ್ಲ. ರೈತರ ಜವಾಬ್ದಾರಿಯನ್ನು ತೆಗೆದು ಸರ್ಕಾರದವರು ತೆಗೆದುಕೊಳ್ಳಲಿ ಎಂದು ಒತ್ತಾಯಮಾಡುತ್ತಾರೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—(ಸಿ) ಪ್ರಶ್ನೆಗೆ ಉತ್ತರವಾಗಿ, "This has happened in a number of cases" ಎಂದು ಹೇಳಿದ್ದಾರೆ. ಟ್ಯಾಂಕ್ ಪಂಚಾಯತಿಯೆಂಬುದಿದೆಯೆಂಬುದು ತಮಗೆ ಗೊತ್ತಿದೆಯೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇದೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಟ್ಯಾಂಕ್ ಪಂಚಾಯಿತಿಗಳು ಇತ್ತೀಚೆಗೆ ಕೆಲಸಮಾಡುತ್ತಿಲ್ಲವೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನಾನು ಮೊದಲೇ ಹೇಳಿದ್ದೇನೆ; ಟ್ಯಾಂಕ್ ಪಂಚಾಯಿತಿ, ಸರ್ಕಾರದ ಅಧಿಕಾರಿಗಳು ಮತ್ತು ರೈತರು—ಈ ಮೂರು ಜನರೂ ಸೇರಿ ಈ ಕೆಲಸಮಾಡಬೇಕು.

ಶ್ರೀ ಎಂ. ಚಿಕ್ಕಲಿಂಗಯ್ಯ.—ಟ್ಯಾಂಕ್ ಪಂಚಾಯಿತಿಯನ್ನು ಮಾಡಿದ್ದರ ಉದ್ದೇಶವೇನು? ಅದನ್ನು ಮಾಡಿದ್ದು ಇದಕ್ಕೇ ಅಲ್ಲವೇ?

Sri H. M. CHANNABASAPPA.—It is a bit difficult to say at this moment. I want notice for this, Sir.

ಶ್ರೀ ಯು. ಎಂ. ಮಾದಪ್ಪ.—ಟ್ಯಾಂಕ್ ಪಂಚಾಯಿತಿಗಳನ್ನು ಇನ್ನೂ ಸರ್ಕಾರದವರು ಪ್ರಾರಂಭಮಾಡಿಯೇ ಇಲ್ಲವೆಂಬುದು ಗೊತ್ತಿದೆಯೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಕೆಲವುಕಡೆ ಇದೆ, ಕೆಲವುಕಡೆ ಇಲ್ಲ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಈ ಟ್ಯಾಂಕ್ ಪಂಚಾಯಿತಿ ಅಡ್ಮಿನಿಸ್ಟ್ರೇಷನ್ ಬಾಡಿಯನ್ನು ನೇಮಕಮಾಡಿದ್ದರ ಉದ್ದೇಶವೇನು?

ಶ್ರೀ ಎಚ್. ಎಂ. ಚನ್ನಬಸಪ್ಪ.—ಆ ಪ್ರಶ್ನೆ ಈಗ ಉದ್ಭವಿಸುವುದಿಲ್ಲ.

ಶ್ರೀ ಎಂ. ಚಿಕ್ಕಲಿಂಗಯ್ಯ.—ವರ್ಷೇವರ್ಷೇ ಈ ಕೆರೆ ಕಾಲುವೆಗಳ ದುರಸ್ತಿ ಕೆಲಸವನ್ನು ರೆಗ್ಯುಲೇಟ್‌ಮಾಡುವುದಕ್ಕಾಗಿ ಅಲ್ಲವೇ ಅದನ್ನು ನೇಮಕಮಾಡಿದ್ದು?

Sri H. M. CHANNABASAPPA.—It is the revenue officers that are responsible to enforce the rules in regard to the maintenance of the minor tanks in the State.

ಶ್ರೀ ಯು. ಎಂ. ಮಾದಪ್ಪ.—ಇಂಥ ಒಂದು ಸಂಸ್ಥೆಯನ್ನು ಸಂಸ್ಥಾನಾದ್ಯಂತವೂ ತಾವು ನೇಮಕಮಾಡಿದ್ದೀರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಕೆಲವು ಕಡೆ ಮಾಡಿದ್ದೇವೆ. ಇನ್ನು ಕೆಲವು ಕಡೆ ಮಾಡಿಲ್ಲ.

ಶ್ರೀ ಯು. ಎಂ. ಮಾದಪ್ಪ.—ಇಂಥ ವಿಚಾರಗಳಲ್ಲಿ ರೈತರು ಮುಂದೆ ಬರಬೇಕೇ ಅಥವಾ ಸರ್ಕಾರದವರು ಮುಂದೆ ಬರಬೇಕೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇದು ಎರಡು ಪಾರ್ಟಿಗಳಿಗೂ ಸೇರಿದ್ದೆಂಬ ಅಂಶ ಮಾನ್ಯಸದಸ್ಯರಿಗೂ ಗೊತ್ತಿರಬೇಕು.

ಶ್ರೀ ಯು. ಎಂ. ಮಾದಪ್ಪ.—ಸರ್ಕಾರದವರು ಈ ಕಾರ್ಯಕ್ಕೆ ಮುಂದೆ ಬಾರದಿರಲು ಕಾರಣವೇನು?

Sri H. M. CHANNABASAPPA.—In regard to the responsibilities regarding the constitution of panchayets, I draw the Hon'ble Member's attention to the relevant rule.

ಶ್ರೀಮತಿ ಬಳ್ಳಾರಿ ಸಿದ್ದಮ್ಮ.—ದಾವಣಗೆರೆ ತಾಲ್ಲೂಕಿನಲ್ಲಿ ದುರಸ್ತಿ ಆಗಬೇಕಾದ ಕೆರೆಗಳ ಸಂಖ್ಯೆ ಎಷ್ಟು?

ಶ್ರೀ ಎಚ್. ಎಂ. ಚನ್ನಬಸಪ್ಪ.—ನೋಟೀಸ್.

ಶ್ರೀಮತಿ ಬಳ್ಳಾರಿ ಸಿದ್ದಮ್ಮ.—ನಾನು ಕಳೆದ ಎರಡು ವರ್ಷಗಳಿಂದಲೂ ಒಂದು ಕೆರೆಯ ದುರಸ್ತಿನ ವಿಚಾರವಾಗಿ ಒತ್ತಾಯಪಡಿಸುತ್ತಿದ್ದರೂ ಏಕೆ ಸರ್ಕಾರದವರು ನಿಗಾ ತೆಗೆದುಕೊಂಡಿಲ್ಲ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದು ಯಾವ ಕೆರೆ ತಿಳಿಸಿ.

ಶ್ರೀಮತಿ ಬಳ್ಳಾರಿ ಸಿದ್ದಮ್ಮ.—ಮರಮಗಟ್ಟೆ ಕೆರೆಯ ವಿಚಾರ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಆ ವಿಚಾರವನ್ನು ಪರಿಶೀಲಿಸುತ್ತೇವೆ.

ಶ್ರೀ ಡಿ. ಎಂ. ಗೋವಿಂದರಾಜು.—ರೈತರು ಸಾಲಾಬಾದು ಕೆಲಸ ಮಾಡಲು ತಪ್ಪಿದರೆ ಅವರು ಕಾಂಟ್ರಿಬ್ಯೂಷ್ನ್ ಕೊಡುವುದಕ್ಕೆ ಸಿದ್ಧವಾಗಿದ್ದರೆ ಸರ್ಕಾರದವರು ಈ ರಿಪೇರಿ ಕೆಲಸವನ್ನು ಏಕೆ ಕೈಗೊಳ್ಳಬಾರದು?

ಶ್ರೀ ಎಚ್. ಎಂ. ಚನ್ನಬಸಪ್ಪ.—ರೈತರು ಕೊಡತಕ್ಕ ಷೇರನ್ನು ರೈತರು ಕೊಡುವ ಪಕ್ಷಕ್ಕೆ ಸರ್ಕಾರದವರು ತಮ್ಮ ಭಾಗವನ್ನು ಕೊಡುವುದಕ್ಕೆ ಯಾವಾಗಲೂ ಸಿದ್ಧವಾಗಿದ್ದರಲ್ಲ.

ಶ್ರೀ ಡಿ. ಎಂ. ಗೋವಿಂದರಾಜು.—ರೈತರು ತಮ್ಮ ಭಾಗದ ಹಣವನ್ನೂ ಮೊದಲು ಸರ್ಕಾರದಲ್ಲಿ ಡಿಪಾಜಿಟ್ ಮಾಡಬೇಕೇನು?

ಶ್ರೀ ಎಚ್. ಎಂ. ಚನ್ನಬಸಪ್ಪ.—ಮಾಡಿದರೆ ಒಳ್ಳೆಯದು.

ಶ್ರೀ ಡಿ. ಎಂ. ಗೋವಿಂದರಾಜು.—ಆ ರೀತಿ ಮೊದಲೇ ರೈತರು ಕಾಂಟ್ರಿಬ್ಯೂಷ್ನ್ ಮೊಬಲಗನ್ನು ಸರ್ಕಾರದಲ್ಲಿ ಡಿಪಾಜಿಟ್ ಮಾಡಿದ್ದರೂ ಸರ್ಕಾರ ಕೆಲಸವನ್ನು ಪ್ರಾರಂಭ ಮಾಡಿಲ್ಲವೆನ್ನುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಆ ವಿಚಾರ ನನ್ನ ಗಮನಕ್ಕೆ ಬಂದಿಲ್ಲ.

ಶ್ರೀ ವಿ. ಆರ್. ನಾಯ್ಡು.—ಈಗ ತಾವು ಇಲ್ಲಿ ಕೊಟ್ಟಿರತಕ್ಕಂಥ ಮೇಜರ್ ಮತ್ತು ಮೈನರ್ ಕೆರೆಗಳಲ್ಲಿ—ಮಾಗಡಿ ಕಂಪೇಗೌಡನ ಕಾಲದಲ್ಲಿ ಕಟ್ಟಿದ ಕೆರೆಗಳ ಸಂಖ್ಯೆ ಎಷ್ಟು? ಮತ್ತು ನಿಮ್ಮ ಕಾಲದಲ್ಲಿ ಕಟ್ಟಿದ ಕೆರೆಗಳ ಸಂಖ್ಯೆಯೆಷ್ಟು?

ಶ್ರೀ ಎಚ್. ಎಂ. ಚನ್ನಬಸಪ್ಪ.—ನೋಟೀಸ್.

ಶ್ರೀ ವಿ. ಆರ್. ನಾಯ್ಡು.—ತಾವು ಇಲ್ಲಿ ಸೇರಿಸಿರುವ ಅನೇಕ ಕೆರೆಗಳಲ್ಲಿ ಬೆಂಗಳೂರಿನಲ್ಲಿರುವ

ಧರ್ಮಾಂಬುಧಿ ಮತ್ತು ಕಂಪಾಂಬುಧಿ ಕೆರೆಗಳೂ ಸೇರಿರುತ್ತವೆಯೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—'ಕೆರೆ' ಎಂದು ಹೆಸರಿರತಕ್ಕವುಗಳೆಲ್ಲಾ ಸೇರುತ್ತವೆ.

ಶ್ರೀ ಜಿ. ಬಕಪ್ಪ.—ಎಕ್ಸ್‌ಪೋಸ್ ಸೆನ್ಸನ್ನು ರೈತರು ಕೊಡುವುದಕ್ಕೆ ಸಿದ್ಧವಾಗಿದ್ದಾರೆ, ಈ ಸಾಲಾಬಾದು ಕಾಂಗಾರಿಯನ್ನು ಸರ್ಕಾರದವರೇ ನಡೆಸಿಕೊಂಡು ಬರಬೇಕೆಂದು ಈ ಸಭೆಯಲ್ಲೇ ಕೇಳಿಲ್ಲವೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಆ ವಿಚಾರ ನನಗೆ ಜ್ಞಾಪಕವಿಲ್ಲ. ಸಭೆಯ ಅಭಿಪ್ರಾಯ ಆ ರೀತಿಯಿದ್ದರೆ ಆಲೋಚನೆ ಮಾಡೋಣ.

Mr. SPEAKER.—Next question.

Sri H. M. CHANNABASAPPA.—I would like to submit that questions pertaining to Sri Siddaveerappa and also to me may kindly be taken up so that I may go to the other House.

Electricity to I.P. sets in Hariyabbe and other villages.

Q.—199. Sri V. MASIYAPPA (Hiriyur).—

Will the Government be pleased to state :—

the action taken by Government on the assurance given by them in the last session regarding supply of electricity for I.P sets to Hariyabbe, Sravanagere, Khandenahally, Halagadaddi, Ikkanur and Kundalagura for which estimates have been sent by Hiriyur and Challakere Senior Operators ?

A.—Sri H. M. CHANNABASAPPA (Minister for Industries).—

Hariyabbe :—An estimate for power supply to 35 I.P. sets has recently been finalised and is under consideration.

Sravanagere :—An estimate for arranging power supply to 19 I.P. sets has recently been finalised and is under scrutiny.

Khandenahalli :—An estimate for power supply to 21 I.P. sets at Khandenahalli and a few other villages nearby for Rs. 1·25 lakhs has been prepared and will be finalised shortly.

Ikkanur and Kundalagura :—A combined estimate for power supply to 23 I.P. sets at these two places has been prepared for Rs. 1·1 lakhs and the same will be finalised shortly.

Halagadaddi :—An estimate for arranging power supply to 20 I.P. sets at Halagadaddi and Maddihalli has been prepared for Rs. 84,500 and is under scrutiny.

ಶ್ರೀ ವಿ. ಮಾಸಿಯಪ್ಪ.—ಈ ಅಂದಾಜು ತಯಾರಾಗಿ ಎಷ್ಟು ವರ್ಷಗಳಾಯಿತು?

*ಶ್ರೀ ಎಚ್. ಎಂ. ಚನ್ನಬಸಪ್ಪ.—ಆ ಅಂದಾಜುಗಳಲ್ಲಿ ಈಗತಾನೆ ಕೆಲವು ಫೈನಲೈಜ್ ಆಗಿ ಸರ್ಕಾರದ ಮುಂದೆ ಬಂದಿವೆ. ಮತ್ತೆ ಕೆಲವು ಇಂಜಿನಿಯರ್ ಅವರ ಪರಿಶೀಲನೆಯಲ್ಲಿವೆ.

ಶ್ರೀ ವಿ. ಮಾಸಿಯಪ್ಪ.—ಈ ಪೈಕಿ 70-80 ಜನರಾಗಲೇ ಆಯಿಲ್ ಎಂಜಿನುಗಳನ್ನು ಇಟ್ಟುಕೊಂಡು ತುಂಬ ತೊಂದರೆ ಪಡುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಈ ವಿಚಾರವನ್ನು ಹೋದ ಅಧಿವೇಶನದ ಕಾಲದಲ್ಲಿ ಮಾನ್ಯ ಸದಸ್ಯರಾದ ತಾವೇ ಸರ್ಕಾರದವರ ಗಮನಕ್ಕೆ ತಂದಿದ್ದೀರಿ. ಆ ಹರಿಯಬ್ಬೆಯ ಅಂದಾಜು ಇವೊತ್ತೋ ನಾಳೆಯೋ ಮಂಜೂರಾಗುವುದರಲ್ಲಿದೆ. ಇನ್ನು ಉಳಿದ ಕಡೆಗಳಲ್ಲಿ ಸರ್ಕಾರದವರ ನಿರೀಕ್ಷಿಸಿರುವ ಮಟ್ಟಕ್ಕೆ ಉತ್ಪತ್ತಿ ಬರುವುದಾದರೆ ಅವುಗಳನ್ನೂ ಕೂಡ ಬೇಗ ಮಂಜೂರು ಮಾಡುತ್ತೇವೆ.

Electricity (supply to I.P. sets in Murudala Betta and Konde Thimmanahalli.

Q.—547. Sri MALI MARIYAPPA (Pavagada).—

Will the Government be pleased to state :—

(*a*) whether estimate for supply of power to Murudala Betta and Konde Thimmanahalli (irrigation wells) is prepared ;

(*b*) the progress so far made ?

A.—Sri H. M. CHANNABASAPPA (Minister for Industries).—

(*a*) No.

(*b*) Does not arise in view of answer to item (*a*).

ಶ್ರೀ ಮಾಲಿ ಮರಿಯಪ್ಪ.—ತಾವು (ಎ)ಗೆ ಉತ್ತರವಾಗಿ 'ಇಲ್ಲ' ಎಂದು ಹೇಳಿದ್ದೀರಿ. ಹೋದ ಸಾಲಿನ ಬಜೆಟ್ಟಿನಲ್ಲಿ ಈಗ ನಾನು ಕೇಳಿರತಕ್ಕ ಎರಡು ಗ್ರಾಮಗಳು ಮತ್ತು ಹಾರನಹಳ್ಳಿ ಒಟ್ಟು ಈ ಮೂರು ಗ್ರಾಮಗಳ ಅಂದಾಜು ಮಂಜೂರಾಗಿ ಆ ಬಗ್ಗೆ ಹಣ ಕೂಡ ಒದಗಿಸಿಲ್ಲವೇ?

*ಶ್ರೀ ಎಚ್. ಎಂ. ಚನ್ನಬಸಪ್ಪ.—ನೋಟೀಸ್.

ಶ್ರೀ ಮಾಲಿ ಮರಿಯಪ್ಪ.—ಆದರೆ ತಾವು ಈಗಲಾದರೂ ಮತ್ತೊಮ್ಮೆ ಆ ಬಜೆಟ್ಟನ್ನು ಪರಿಶೀಲನೆ ಮಾಡಲಾಗುತ್ತದೆಯೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಮಾನ್ಯ ಸದಸ್ಯರು ಕೇಳಿದರೆ ಮಾಡೋಣ.